ವಿಷಯ: ರಾಜ್ಯದಲ್ಲಿ ಫಾರ್ಮಸಿಸ್ಟ್‌ಗಳ ಹುದ್ದೆ ಕುರಿತು.

2510 (3874)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಎಷ್ಟು ಜನ ಫಾರ್ಮಸಿಸ್ಟ್‌ಗಳು ಕೆಲಸ ಮಾಡುತ್ತಿದ್ದಾರೆ? (ಜಿಲ್ಲಾವಾರು ವಿವರ ನೀಡುವುದು)

ಆ) ಬಹಳಷ್ಟು ವರ್ಷಗಳಿಂದ ಒಂದೇ ಕಡೆಯಲ್ಲಿ ಕೆಲಸ ಮಾಡುತ್ತಿದ್ದು ಖಾಸಗಿಯಾಗಿ ಮೆಡಿಕಲ್ ಶಾಪನ್ನು ನಡೆಸುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ?

ಇ) ಸುಮಾರು 5 ವರ್ಷಗಳಿಂದ ಒಂದೇ ಕಡೆಯಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು; ವರ್ಗಾವಣೆ ಮಾಡದಿರಲು ಕಾರಣಗಳೇನು; ವಿವರ ನೀಡುವುದು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 1752 ಫಾರ್ಮಾಸಿಸ್ಟರು ಕೆಲಸ ಮಾಡುತ್ತಿದ್ದಾರೆ. (ಜಿಲ್ಲಾವಾರು ವಿವರದ ಪಟ್ಟಿ ಲಗತ್ತಿಸಿದೆ)

ಆ) ಬಂದಿರುವುದಿಲ್ಲ.

ಇ) 1087 ಕಳೆದ ಮೂರು ವರ್ಷಗಳಿಂದ ಸರ್ಕಾರದಿಂದ ಹೊರಡಿಸಲಾದ ವರ್ಗಾವಣೆ ಮಾರ್ಗಸೂಚಿಯಲ್ಲಿ ಸಾಮಾನ್ಯ ವರ್ಗಾವಣೆ ಮಾಡಲು ಅವಕಾಶವಿಲ್ಲದೆ ಇದ್ದುದರಿಂದ, ಇವರುಗಳ ವರ್ಗಾವಣೆ ಮಾಡಿರುವುದಿಲ್ಲ.

ದಿನಾಂಕ: 30-4-1997ರಲ್ಲಿದ್ದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಫಾರ್ಮಾಸಿಸ್ಟ್‌ಗಳ ಜಿಲ್ಲಾವಾರು ವಿವರ:

ಕ್ರ. ಸಂ.	ಜಿಲ್ಲೆಗಳು	ಮಂಜೂರಾದ ಹುದ್ದೆಗಳು	ಕಾರ್ಯನಿರತ ಹುದ್ದೆಗಳು	ಖಾಲಿಇರುವ ಹುದ್ದೆಗಳು
1)	ಬೆಂಗಳೂರು (ನಗರ)	128	123	5
2)	ಬೆಂಗಳೂರು (ಗ್ರಾಮಾಂತರ)	115	78	37
3)	ಕೋಲಾರ	134	100	34
4)	ತುಮಕೂರು	132	91	41
5)	ಶಿವಮೊಗ್ಗ	149	89	60
6)	ಚಿತ್ರದುರ್ಗ	168	124	47
7)	ಮೈಸೂರು	201	135	66
8)	ಮಂಡ್ಯ	135	88	47
9)	ದಕ್ಷಿಣ ಕನ್ನಡ	164	76	88
10)	ಹಾಸನ	148	85	63
11)	ಚಿಕ್ಕಮಗಳೂರು	96	60	36
12)	ಬೆಳಗಾಂ	143	123	20
13)	ಉತ್ತರ ಕನ್ನಡ (ಕಾರವಾರ)	107	54	53
14)	ಕೊಡಗು (ಮಡಿಕೇರಿ)	59	22	37
15)	ಧಾರವಾಡ	151	126	25
16)	ಬಿಜಾಪುರ	124	100	24
17)	ಗುಲ್ಬರ್ಗಾ	138	93	45
18)	ಬೀದರ್	62	58	4
19)	ಬಳ್ಳಾರಿ	84	62	22
20)	ರಾಯಚೂರು	88	65	23
	ಒಟ್ಟು	2526	1752	714